ಶಾಲಾ ಸಿದ್ಧತೆ

ವೃಂದಾ ದತ್ತಾ

ಮಕ್ಕಳ ಶೈಕ್ಷಣಿಕ ಹಕ್ಕು ಕಾನೂನಿನ ಅಡಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳ ದಾಖಲಾತಿಯ ಪ್ರಮಾಣ ಶೇ 96 ರಷ್ಟು (ಅಸರ್ 2013) ಹೆಚ್ಚಿದೆ. ಆದಾಗ್ಯೂ, ಭಾರತದಲ್ಲಿನ ಶಿಕ್ಷಣ ಕ್ಷೇತ್ರಗಳಲ್ಲಿ ಹೇಳಿಕೊಟ್ಟಿದ್ದನ್ನು ಮನಸ್ಸಲ್ಲಿ ಇಟ್ಟುಕೊಳ್ಳುವಶಕ್ತಿ, ಹೇಳಿಕೊಟ್ಟದ್ದನ್ನು ಮತ್ತೆ ಹೇಳುವುದು, ಮಧ್ಯದಲ್ಲೇ ಶಾಲೆ ಬಿಡುವುದು ಮತ್ತು ಕಲಿಕೆಯ ಮಟ್ಟಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳು ಇನ್ನೂ ದೊಡ್ಡ ಸವಾಲುಗಳಾಗಿಯೇ ಉಳಿದಿವೆ. ಆದ್ದರಿಂದ, ಶಾಲೆಗಳಲ್ಲಿ ಮಗುವಿನ ದಾಖಲಾತಿ, ಮಗು ಶಾಲೆಗೆ ಒಗ್ಗಿಕೊಳ್ಳುವುದು ಮತ್ತು ಯಶಸ್ವಿಯಾಗುವಿಕೆಯನ್ನು ಅರ್ಥ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮನೆಯಿಂದ ಶಾಲೆಗೆ ಮಗು ಹೊಂದಿಕೊಳ್ಳುವುದು ಬಹಳ ಪ್ರಮುಖ ಘಟನೆಯಾಗಿದೆ. ಮಗುವಿನ ಸ್ಥಿತ್ಯಂತರ ಎಂದರೆ, ಮನೆ ಅಥವಾ ಆರಂಭಿಕ ಬಾಲ್ಯದ ಶಿಕ್ಷಣದ ಶಾಲೆಯಿಂದ (ಯುನಿಸೆಫ್, 2012) ಮಗುವು ಪದ್ಧತಿ ಶಾಲೆಗೆ ಹೋಗುವ ಮೊದಲು ಮತ್ತು ನಂತರದ ಅವಧಿಯಾಗಿದೆ. ವಿದ್ವಾಂಸರ ಕೃತಿಗಳಲ್ಲಿ ಒಪ್ಪಿಕೊಂಡಿರುವ ಪ್ರಕಾರ, ಮಕ್ಕಳಲ್ಲಿ ಸ್ಥಿತ್ಯಂತರವು ಸರಾಗವಾಗಿ ಆಗಬೇಕಾದರೆ, ಮಕ್ಕಳು ಶಾಲೆಗೆ ತಯಾರಾಗಿರಬೇಕು ಹಾಗೂ ಶಾಲೆಗಳು ಕೂಡ ಮಕ್ಕಳಿಗಾಗಿ ತಯಾರಾಗಿರಬೇಕು (ಯುನಿಸೆಫ್, 2012). ಆದ್ದರಿಂದ ಸ್ಥಿತ್ಯಂತರ ಮತ್ತು ಶಾಲಾ ಸಿದ್ಧತೆ ಇವೆರಡೂ ಪರಸ್ಪರ ಸಂಬಂಧವನ್ನು ಹೊಂದಿರುವ ಪರಿಕಲ್ಪನೆಗಳಾಗಿವೆ. ಮೊದ ಮೊದಲ ಕೃತಿಗಳು ಶಾಲಾ ಸಿದ್ಧತೆಯಲ್ಲಿ, ಗ್ರಹಣಶಕ್ತಿ ಮತ್ತು ಶೈಕ್ಷಣಿಕ ಕೌಶಲ್ಯದ ಮೇಲೆ ಹೆಚ್ಚು ಒತ್ತು ನೀಡಿವೆ. ಆದರೆ ಇತ್ತೀಚಿನ ದಿನಗಳಲ್ಲಿ, ಶಾಲಾ ಸಿದ್ಧತೆ ಒಂದು ಸಮಗ್ರ ಪರಿಕಲ್ಪನೆಯಾಗಿದೆ. ಇದು ಒಮ್ಮಿಂದೊಮ್ಮಲೇ ನಡೆಯುವ ಘಟನೆಯಲ್ಲ, ಬದಲಾಗಿ ಶಾಲೆಗೆ ಸಿದ್ಧಗೊಳ್ಳುವುದು ಎಂದರೆ ಮಗುವಿನ ಅಲ್ಲಿಯ ವರೆಗಿನ ಜೀವನದ ಒಟ್ಟು ಫಲ. (ಜೇನಸ್, ಹ್ಯೂಗ್ಸ್ ಡ್ಯೂಕ್, 2010). ಇದರೊಂದಿಗೆ ಶಾಲೆಗೆ ಹೋಗಲು ತಯಾರಾದ ಮಗುವಿಗೆ, ಅದರ ಕಲಿಕೆ ಮತ್ತು ಬೆಳವಣಿಗೆಗೆ ಪೂರಕವಾದಂತಹ ಶಾಲೆಗಳು ಬೇಕು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಯುನಿಸೆಫ್, ಶಾಲಾ ಸಿದ್ಧತೆಯ ಮಾದರಿಯನ್ನು ತಯಾರಿಸಿದೆ. ಈ ಮಾದರಿಯಲ್ಲಿ ತಯಾರಾದ ಕುಟುಂಬಗಳು, ತಯಾರಾದ ಶಾಲೆಗಳು ಮತ್ತು ತಯಾರಾದ ಮಕ್ಕಳು ಈ ಮೂರು ಪ್ರಮುಖ ಆಯಾಮಗಳು ಶಾಲಾ ಸಿದ್ಧತೆಯಲ್ಲಿ ಪರಸ್ಪರ ಕಾರ್ಯನಿರ್ವಹಿಸುತ್ತವೆ. ಅಲ್ಲದೆ, ಅದು ಶಾಲೆಗಳು, ಕುಟುಂಬಗಳು ಮತ್ತು ಸಮುದಾಯಗಳು ಪ್ರಮುಖ ಪಾತ್ರವನ್ನು ವಹಿಸುವ. ಪರಿವರ್ತನಾ ಅವಧಿಯನ್ನು ಕುರಿತು ಮಾಹಿತಿಯನ್ನು ನೀಡಿದೆ.

ತಯಾರಾದ ತಂದೆತಾಯಿಯರು

ಪುಟ್ಟ ಮಕ್ಕಳಿಗೆ, ಹೆತ್ತವರು ಮತ್ತು ಪೋಷಕರು ಆರೈಕೆ ಮತ್ತು ವಾತ್ಸಲ್ಯವನ್ನು ನೀಡುತ್ತಾರೆ. ಹೆತ್ತವರು ಲಾಲನೆ ಪಾಲನೆಯಲ್ಲಿ ನಿರತರಾಗಿ ಮಗುವಿನ ವಿವಿಧ ಆವಶ್ಯಕತೆ ಮತ್ತು ಅದರ ಬೆಳವಣಿಗೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡರೆ ಅವರು ಮಕ್ಕಳಿಗೆ ಸರಿಯಾದ ಪೋಷಣೆ, ಉತ್ತೇಜನ, ಆರೋಗ್ಯ ರಕ್ಷಣೆ ಮತ್ತು ಅಕ್ಕರೆಯ ಮನೆಯ ವಾತಾವರಣವನ್ನು ಒದಗಿಸುತ್ತಾರೆ. ಅಂತಹ ತಂದೆತಾಯಿಯರು ತಮ್ಮ ಲಾಲನೆ ಪಾಲನೆಗೆ ಪೂರಕವಾಗುವಂತಹ, ಮಗುವಿನ ಆರೈಕೆ ಕುರಿತ ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಲಾರಂಭಿಸುತ್ತಾರೆ. ವಿವಿಧ ಸಾಮಾಜಿಕ ಆರ್ಥಿಕ ಸ್ತರದಲ್ಲಿರುವ ಕುಟುಂಬಗಳು ಮಕ್ಕಳ ಬೆಳವಣಿಗೆಗೆ ವಿಭಿನ್ನ ಅವಕಾಶವನ್ನು ಕಲ್ಪಿಸುತ್ತವೆ. ಆದರೆ ತಂದೆತಾಯಿಯರಿಗೆ ಈ ಬಗ್ಗೆ ವಿಷಯ ಚೆನ್ನಾಗಿ ತಿಳಿದಿದ್ದರೆ ಮತ್ತು ಮಕ್ಕಳೊಂದಿಗೆ ಚೆನ್ನಾಗಿ ಬೆರೆತು ಲಾಲನೆ ನೀಡುತ್ತಿದ್ದರೆ ಮನೆಯಲ್ಲಿಯೇ ಇರುವ ಸಂಪನ್ಮೂಲಗಳನ್ನು ಗರಿಷ್ಠ ಮಟ್ಟಕ್ಕೆ ಬಳಸುವಲ್ಲಿ ಯಶಸ್ವಿಯಾಗುತ್ತಾರೆ. ಅಲ್ಲದೆ, ಇವರು ಪುಟ್ಟ ಮಕ್ಕಳನ್ನು ಕುರಿತು ಇರುವ ವಿವಿಧ ಕಾರ್ಯಕ್ರಮಗಳನ್ನು ಮತ್ತು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಅಂತಹ ತಂದೆತಾಯಿಯರು ಶಾಲೆಗಳಿಗೆ ತಮ್ಮ ಮಕ್ಕಳು ಚೆನ್ನಾಗಿ ಒಗ್ಗಿಕೊಳ್ಳುವಂತೆ ಮಾಡಲು ಮತ್ತು ಅವರ ಬೆಳವಣಿಗೆ ಚೆನ್ನಾಗಿ ಆಗುವಂತೆ ಮಾಡಲು ಸೂಕ್ಷ್ಮ ಆಸಕ್ತಿಯನ್ನು ಹೊಂದಿರುತ್ತಾರೆ. ಇವೆಲ್ಲವೂ ನಡೆಯಬೇಕಾದಲ್ಲಿ ಪುಟ್ಟ ಮಕ್ಕಳನ್ನು ಕುರಿತ ಕಾರ್ಯಕ್ರಮಗಳು ಅತಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ತಂದೆತಾಯಿಯರ ಸಹಭಾಗಿತ್ವ, ಅವರ ಒಳಗೊಳ್ಳುವಿಕೆ ಮತ್ತು ತಂದೆತಾಯಿಯರಿಗೆ ಶಿಕ್ಷಣ, ಮಕ್ಕಳ ಶೈಕ್ಷಣಿಕ ಜೀವನದಲ್ಲಿ ಮತ್ತು ಅವರ ಬೆಳವಣಿಗೆಯಲ್ಲಿ ಸಹಭಾಗಿಗಳಂತೆ ಇರಲು ಸಹಾಯಕವಾಗಿರುತ್ತದೆ.

ಶಾಲೆಗೆ ಮಕ್ಕಳು ತಯಾರಾಗುವಿಕೆ

ಮಕ್ಕಳ ಮೊದಲ ಐದು ವರ್ಷಗಳು, ಅವರು ತಮ್ಮ ಪರ್ಯಾಪ್ತ ಸಾಮರ್ಥ್ಯಕ್ಕೆ ಬೆಳೆಯಲು ಸದವಕಾಶದ ದ್ವಾರವೆಂದು ಸಾಬೀತಾಗಿದೆ. ಆದ್ದರಿಂದ, ಪುಟ್ಟ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು ಮಕ್ಕಳ ಬೆಳವಣಿಗೆಗೆ ಅತ್ಯವಶ್ಯಕ, ಎನ್ನುವುದನ್ನು ಸರ್ವಸಮ್ಮತ ಅಭಿಪ್ರಾಯವಾಗಿದೆ. ಅಲ್ಲದೆ ಈ ಸರ್ವಾಂಗೀಣ ಬೆಳವಣಿಗೆಯ ವಿಧಾನವು ಅವರ ಆರೋಗ್ಯ, ಪೋಷಣೆ ಮತ್ತು ಬೆಳವಣಿಗೆಗೆ ಕಡ್ಡಾಯವಾಗಿ ಸಮಾನ ಒತ್ತನ್ನು ನೀಡುವಂತೆ ಮಾಡಿದೆ. ಏಕೆಂದರೆ ಇವೆಲ್ಲದರ ಕೂಡು ಫಲವಾಗಿಯೇ ಮಕ್ಕಳು ಪರ್ಯಾಪ್ತ ಮಟ್ಟಕ್ಕೆ ಬೆಳೆಯುತ್ತಾರೆ. ಮಕ್ಕಳ ಅಭಿವೃದ್ಧಿಗೆ ಅವಕಾಶವನ್ನು ಕಲ್ಪಿಸುವ, ಈ ಸಮಗ್ರ ಬೆಳವಣಿಗೆಯ ವಿಧಾನವು ಮಗುವನ್ನು ಕೇವಲ ದೈಹಿಕವಾಗಿ ಪುಷ್ಟಿಗೊಳಿಸುವುದೇ ಅಲ್ಲದೆ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸಮರ್ಥನನ್ನಾಗಿಸುವ ಕಡೆಗೆ ಗಮನ ಹರಿಸುತ್ತದೆ. ಮಗುವು ಶಾಲೆಗೆ ಸೇರಿದ ಆರಂಭಿಕ ವರ್ಷಗಳಲ್ಲಿ ಅರಿವಿನ ಮತ್ತು ಭಾಷಾ ಕೌಶಲ್ಯಕ್ಕೆ ಸಂಬಂಧಪಟ್ಟ ವಿಚಾರಗಳು, ಅವರ ಶಾಲೆಗೆ ತಯಾರಾಗುವಿಕೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಕಲಿಕೆ ಮತ್ತು ಪರಸ್ಪರ ಬೆರೆಯುವಿಕೆಯಿಂದ ಕಲಿತ ಅನೇಕ ಸ್ವಭಾವಗಳು ಮತ್ತು ಕೌಶಲ್ಯಗಳನ್ನು ಮಗುವು ತೋರಿಸುತ್ತದೆ. ಆದ್ದರಿಂದ ಪುಟ್ಟಮಕ್ಕಳ ಬಗ್ಗೆ ಇರುವ ಉಪಕ್ರಮಗಳು ಮತ್ತು ಕಾರ್ಯಕ್ರಮಗಳು ಮಗುವು ಶಾಲೆಗೆ ತಯಾರಾಗುವಿಕೆಯಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಆದರೆ, ಅವು ಪರಿಣಾಮಕಾರಿಯಾಗಿರಲು ಉತ್ತಮ ಗುಣಮಟ್ಟವನ್ನು ಹೊಂದಿದ್ದು, ಸಂದರ್ಭಕ್ಕೆ ಸೂಕ್ತವಾಗಿರಬೇಕು. ಮಕ್ಕಳ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶವನ್ನು ಅರ್ಥಮಾಡಿಕೊಂಡು ಅವರ ವಯಸ್ಸು ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ವಸ್ತುಗಳನ್ನು ಒದಗಿಸುವುದರಿಂದ ಈ ಕಾರ್ಯಕ್ರಮವನ್ನು ಎಲ್ಲಾ ಮಕ್ಕಳಿಗೂ ತಲುಪುವಂತೆ ಮಾಡಬಹುದು. ಭಾರತದಲ್ಲಿ ಈ ಕಾರ್ಯಕ್ರಮಗಳನ್ನು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ನಡೆಸಲಾಗುತ್ತಿದೆ. ಇಲ್ಲಿ ಯಾವುದೇ ನಿಗದಿತವಾದ ನಿಯಮಗಳಿಲ್ಲದೆ ಪ್ರತಿಯೊಬ್ಬರೂ ತಮಗೆ ತಿಳಿದ ಹಾಗೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಇಂತಹ ಭಿನ್ನ ಗುಣಮಟ್ಟದ ಕಾರ್ಯಕ್ರಮಗಳಿಂದಾಗಿ ಮಕ್ಕಳಿಗೆ ದೊರೆಯುವ ಪ್ರಯೋಜನವೂ ಬೇರೆ ಬೇರೆಯಾಗಿರುತ್ತದೆ. ಇದರ ಪರಿಣಾಮವೇನೆಂದರೆ, ಮಕ್ಕಳು ಶಾಲಾ ಶಿಕ್ಷಣಕ್ಕೆ ವಿಭಿನ್ನ ರೀತಿಗಳಲ್ಲಿ ತಯಾರಾಗಿ ಬಂದಿರುತ್ತಾರೆ, ಅದನ್ನು ಶಾಲೆಗಳು ಒಪ್ಪಿಕೊಂಡು ಅದಕ್ಕೆ ಸರಿಯಾಗಿ ತಾವೂ ತಯಾರಾಗಬೇಕಾಗುತ್ತದೆ.

ಸಿದ್ಧ ಶಾಲೆಗಳು

ಸಿದ್ಧ ಶಾಲೆಗಳ ಪ್ರಮುಖ ಅಂಶವೆಂದರೆ, ಎಲ್ಲಾ ಮಕ್ಕಳೂ ಕಲಿಯುವಂತಹ ವಾತಾವರಣವನ್ನು ಸೃಷ್ಟಿಸುವುದು. ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಹಕ್ಕು ಕಾನೂನಿನ ಅಡಿಯಲ್ಲಿ ಹೆಚ್ಚಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಸುಲಭವಾಗಿ ದೊರಕುವುದು ಸಾಧ್ಯವಾಗಿದೆ. ಆದರೆ ಮಕ್ಕಳು ಪ್ರಾಥಮಿಕ ಶಿಕ್ಷಣಕ್ಕೆ ಸುಲಭವಾಗಿ ಪರಿವರ್ತನೆಯನ್ನು ಹೊಂದುವಲ್ಲಿ ಯಶಸ್ವಿಯಾಗುವಂತೆ, ಶಾಲೆಗಳು ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಸಂದರ್ಭಕ್ಕೆ ತಕ್ಕ ಪುಸ್ತಕಗಳನ್ನು, ವಸ್ತುಗಳನ್ನು ಮತ್ತು ಪಠ್ಯಕ್ರಮಗಳನ್ನು ಒದಗಿಸಬೇಕಾಗುತ್ತದೆ. ಸಿದ್ಧ ಶಾಲೆಗಳು ಪ್ರಮುಖವಾಗಿ ಮೂರು ಮುಖ್ಯ ಹಂತಗಳ ಮೇಲೆ ಗಮನಹರಿಸಬೇಕಾಗುತ್ತದೆ 1) ಸ್ಥಿತ್ಯಂತರದ ಪೂರ್ವ ಹಂತ 2) ಸ್ಥಿತ್ಯಂತರದ ಹಂತ ಮತ್ತು 3) ಶಾಲಾ ವಾತಾವರಣಕ್ಕೆ ಒಗ್ಗಿಕೊಳ್ಳುವಂತೆ ಮಾಡುವುದು. ಸ್ಥಿತ್ಯಂತರದ ಪೂರ್ವ ಹಂತದಲ್ಲಿ ಪುಟ್ಟ ಮಕ್ಕಳನ್ನು ಕುರಿತ ಕಾರ್ಯಕ್ರಮಗಳೊಂದಿಗೆ ಸಂಪರ್ಕವನ್ನು ಹೊಂದುವುದು ಅತ್ಯಾವಶ್ಯಕವಾಗಿರುತ್ತದೆ. ಶಾಲೆಗಳು, ಸಮುದಾಯದಲ್ಲಿರುವ ಮಕ್ಕಳು ಯಾವ ಬಗೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ, ಎಂತಹ ಅನುಭವದೊಂದಿಗೆ ಮತ್ತು ಕಲಿಕೆಯೊಂದಿಗೆ ಅಲ್ಲದೇ ಯಾವ ಸಾಮಾಜಿಕ ಸಾಂಸ್ಕೃತಿಕ ಹಿನ್ನಲೆಯೊಂದಿಗೆ ಶಾಲೆಗೆ ಪ್ರವೇಶಿಸುತ್ತಾರೆ ಎಂಬುವುದನ್ನು ಕುರಿತು ಗಮನ ಹರಿಸಬೇಕಾಗುತ್ತದೆ. ಈ ಎಲ್ಲಾ ಮಾಹಿತಿಗಳಿಂದಾಗಿ ಆ ಪುಟ್ಟ ಮಕ್ಕಳ ಅನುಭವದ ಆಧಾರದ ಮೇರೆಗೆ ಶಿಕ್ಷಕರು ಮಕ್ಕಳನ್ನು ಹೇಗೆ ಗುಂಪುಗಳನ್ನಾಗಿ ವಿಭಾಗಿಸಬಹುದು, ಅಲ್ಲದೇ ಯಾವ ಬೋಧನಾ ವಿಧಾನವನ್ನು ಬಳಸಿ ವಿವಿಧ ಬಗೆಯ ತಯಾರಿಯೊಂದಿಗೆ ಮಕ್ಕಳನ್ನು ತಲುಪಬಹುದು ಎಂದು ತಿಳಿಯಲು ಸಹಾಯವಾಗುತ್ತದೆ. ಆದ್ದರಿಂದ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳು ಶಾಲೆಯನ್ನು ಒಪ್ಪಿ, ಉತ್ಸಾಹದಿಂದ ಭಾಗವಹಿಸುವಲ್ಲಿ ಪುಟಾಣಿ ಮಕ್ಕಳನ್ನು ಕುರಿತ ಕಾರ್ಯಕ್ರಮದ ಕಾರ್ಯಕರ್ತರು, ಶಾಲೆಯ ಶಿಕ್ಷಕರು ಮತ್ತು ಪೋಷಕರ ನಡುವಿನ ಸಂಪರ್ಕ ಅತಿ ಮುಖ್ಯವಾಗಿರುತ್ತದೆ. ಸ್ಥಿತ್ಯಂತರದ ಹಂತದಲ್ಲಿ ಎಂದರೆ, ಮಗುವು ಶಾಲೆಯನ್ನು ಸೇರಿದ ಕೆಲವು ದಿನಗಳಲ್ಲಿ ಅದು ಸಾಕಷ್ಟು ಹೊಂದಾಣಿಕೆ ಮತ್ತು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಸಿದ್ಧ ಶಾಲೆಗಳು ಇವೆಲ್ಲವುಗಳ ಕುರಿತು ಎಚ್ಚರಿಕೆಯನ್ನು ವಹಿಸಿ, ವಿಭಿನ್ನ ರೀತಿಯ ಮತ್ತು ಪರಸ್ಪರ ಬೆರೆಯುವಂತಹ ಚಟುವಟಿಕೆಗಳು ಮತ್ತು ಯೋಜನೆಗಳನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳು ಶಾಲಾ ವಾತಾವರಣಕ್ಕೆ, ನಿತ್ಯಕ್ರಮಗಳಿಗೆ ಮತ್ತು ನಿರೀಕ್ಷೆಗಳಿಗೆ ಹೆಚ್ಚು ಸುಗಮವಾಗಿ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಸಿದ್ಧ ಶಾಲೆಗಳು, ಈ ಸ್ಥಿತ್ಯಂತರ ಅವಧಿಯನ್ನು ಕುರಿತು ಸೂಕ್ಷ್ಮ ಮಾಹಿತಿಯನ್ನು ಹೊಂದಿರುವ ಮತ್ತು

ಸೂಕ್ತವಾದ ಪಠ್ಯಕ್ರಮಗಳನ್ನು ರೂಪಿಸುವಂತಹ ಶಿಕ್ಷಕರನ್ನು ಹೊಂದಿರಬೇಕಾಗುತ್ತದೆ. ಈ ಶಿಕ್ಷಕರು, ಮಕ್ಕಳು ಯಾವಾಗ ತಾವು ಹೊಂದಿಕೊಳ್ಳುತ್ತಾರೆ ಮತ್ತು ಹೇಗೆ ಎಂದು ತಿಳಿದು ಮಕ್ಕಳ ನಿರೀಕ್ಷೆಗೆ ಅನುಗುಣವಾಗಿ ಉಳಿದ ಪಠ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಇಂತಹ ಪ್ರಕ್ರಿಯೆಗಳು ಮಗುವಿನ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಮತ್ತು ಯಾವುದೇ ಭಯವಿಲ್ಲದೇ ಹೊಸ ಕಲಿಕೆಯ ವಿಧಾನವನ್ನು ಸ್ವೀಕರಿಸುವಂತೆ ಮಾಡುವಲ್ಲಿ ಸಹಕಾರಿಯಾಗಿವೆ. ಆದ್ದರಿಂದ, ಶಾಲೆಗಳಲ್ಲಿ ಸ್ಥಿತ್ಯಂತರ ಪೂರ್ವ ಹಂತ, ಸ್ಥಿತ್ಯಂತರದ ಹಂತ, ಶಾಲೆಗೆ ಮಗುವು ಒಗ್ಗಿಕೊಳ್ಳುವ ಹಂತ ಇವೆಲ್ಲವೂ ಸಿದ್ಧ ಶಾಲೆಗಳ ಪ್ರಮುಖ ಭಾಗಗಳಾಗಿವೆ.

ತೀರ್ಮಾನ

ಶಾಲಾ ಸಿದ್ಧತೆ ನಡೆಯುವುದು, ಪೋಷಕರು, ಮಕ್ಕಳು ಮತ್ತು ಶಾಲೆಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದಾಗ ಮಾತ್ರ ಸಾಧ್ಯ. ಇದರಲ್ಲಿ ಪ್ರತಿಯೊಬ್ಬರ ಪಾತ್ರವು ಮುಖ್ಯವಾಗಿರುತ್ತದೆ. ಶಾಲೆಗಳಲ್ಲಿ ಅನುಕೂಲಕರ ವಾತಾವರಣವನ್ನು ರೂಪಿಸುವಲ್ಲಿ ಕಾರ್ಯಕ್ರಮಗಳು ಮತ್ತು ನೀತಿ-ನಿಯಮಗಳು ಪೂರಕವಾಗಿರಬೇಕಾಗುತ್ತದೆ. ಮಕ್ಕಳು ಶಾಲೆಗೆ ತಯಾರಾಗಲು, ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮಕ್ಕೆ ಸೇರಿಕೊಳ್ಳುವುದು ಅಗತ್ಯವಾಗುತ್ತದೆ. ಶಾಲಾ ಸಿದ್ಧತೆ, ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮ ಮತ್ತು ಪ್ರಾಥಮಿಕ ಶಾಲೆಗಳ ನಡುವಿನ ಉತ್ತಮ ಸಂಪರ್ಕದಿಂದ ಸಾಧ್ಯವಾಗುತ್ತದೆ. ಅಂತಿಮವಾಗಿ ನಾವು ಶಾಲಾ ಸಿದ್ಧತೆಯನ್ನು, ಮಕ್ಕಳು ಶಾಲಾ ವಾತಾವರಣಕ್ಕೆ ಒಗ್ಗಿಕೊಳ್ಳುವುದು ಮತ್ತು ಶಿಕ್ಷಣಕ್ಕಾಗಿ ಮುಖ್ಯವಾದ ಪ್ರಕ್ರಿಯೆ ಎಂದು ಮನಗಂಡಲ್ಲಿ, ಮಕ್ಕಳ ಭಾವನೆಗಳನ್ನು ಸೂಕ್ಷ್ಮವಾಗಿ ಅರಿಯುವ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವಂತಹ ಶಿಕ್ಷಕರು ಮತ್ತು ಶಿಶು ಆಧಾರಿತ ಶಿಕ್ಷಕರನ್ನು ಹೆಚ್ಚು ಪ್ರೋತ್ಸಾಹಿಸಬೇಕಾಗುತ್ತದೆ.

References

1. ASER 2013, 9th Annual Status of Education Report.
2. Janus,M; Hughes,D; Duku,E 2010 Patterns of School Readiness among selected subgroups of Canadian Children: Children with special needs and children with diverse language background. Oxford center for Child Studies, McMaster University, Canada
3. UNICEF 2012 School Readiness and Transition. A companion to child friendly school manual. NY; UNICEF

ವೃಂದಾರವರು ಹ್ಯೂಮನ್ ಎಕೋಲಜಿ ಸೆಂಟರ್, ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್, ಮುಂಬೈನಲ್ಲಿ ಪ್ರೊಫೆಸರ್ ಆಗಿದ್ದಾರೆ ಮತ್ತು ಆರಂಭಿಕ ಬಾಲ್ಯ ಶಿಕ್ಷಣ ಮತ್ತು ಅಭಿವೃದ್ಧಿ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ(ಎಇಸಿಇಡಿ), ಇದು ರಾಷ್ಟ್ರಿಯ ಸಂಸ್ಥೆಗಳ ಜಾಲವಾಗಿದೆ ಮತ್ತು ಇಲ್ಲಿ ಪ್ರತಿಯೊಬ್ಬರೂ ಪುಟ್ಟ ಮಕ್ಕಳ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಾರೆ. ಪ್ರೊ॥ ದತ್ತಾರವರು ಮಾನವನ ಅಭಿವೃದ್ಧಿ (ಹ್ಯೂಮನ್ ಡೆವಲಪ್ ಮೆಂಟ್)ಯಲ್ಲಿ ಪಿಹೆಚ್. ಡಿ.ಯನ್ನು ಪಡೆದಿದ್ದಾರೆ. ಅಲ್ಲದೇ ಶಿಶು ಶಿಕ್ಷಣ ವಿಷಯವನ್ನು ಕುರಿತು ಸೂಕ್ಷ್ಮ ಸಂಶೋಧಕರಾಗಿದ್ದಾರೆ. ಅವರು ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮ, ಶಿಕ್ಷಕರ ತರಬೇತಿ ಮತ್ತು ಮಕ್ಕಳ ಅಭಿವೃದ್ಧಿಯ ಮೇಲೆ ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮದ ಪರಿಣಾಮ, ಇವುಗಳ ಗುಣಮಟ್ಟಕ್ಕೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಕೆಲಸ ಮಾಡಿದ್ದಾರೆ. ಅವರು ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. 2005 ರಲ್ಲಿ ಪ್ರೊ॥ ದತ್ತಾರವರು ವರ್ಲ್ಡ್ ಫೋರಂ ಫೌಂಡೆಷನ್ ರವರಿಂದ ಭಾರತದ ಪರವಾಗಿ ಜಾಗತಿಕ ಮುಖಂಡರಾಗಿ ಆಯ್ಕೆಯಾಗಿದ್ದರು. ಅಲ್ಲದೇ ಅವರು 2005 ರಲ್ಲಿ ಅಮೇರಿಕಾದ ಸೀನಿಯರ್ ಫುಲ್ ಬ್ರೈಟ್ ರಿಸರ್ಚ್ ಫೆಲೋಶಿಪ್ ನ ವಿಜೇತರಾಗಿದ್ದಾರೆ. ಅವರನ್ನು vrinda@tiss.edu ಅಥವಾ vdatta05@hotmail.com ನಲ್ಲಿ ಸಂಪರ್ಕಿಸಬಹುದು.